**ದಿನಾಂಕ 09.07.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ KDR ವರಿಂದಃ**

ವಕೀಲರಿಗೆ ನಾನು ಒಬ್ಬಳೆ ದಾವೆಯ ಬಗ್ಗೆ ಮಾಹಿತಿ ಕೊಟ್ಟಿರುತ್ತೆನೆ. ಉಳಿದ ವಾದಿಯರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಕೊಟ್ಟಿರುತ್ತಾರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಈ ವಿಚಾರ ನನ್ನ ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸದೇ ಇರುವುದಕ್ಕೆ ಕಾರಣ ಇಲ್ಲ. 1ನೇ ವಾದಿ ಮತ್ತು 3ನೇ ವಾದಿ ಬೇರೆ ಬೇರೆ ವಾಸ ಇದ್ದಾರೆ. ನಾವು ಮೂರು ಜನ ವಾದಿಯರು ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇಲ್ಲ. ನನ್ನ ಮದುವೆ 1985 ರಲ್ಲಿ ಆಗಿರುತ್ತದೆ. ಆಗ ನನ್ನ ತಂದೆಗೆ ಎಷ್ಟು ವಯಸ್ಸಾಗಿತ್ತು ಎಂದು ನೆನಪಿಲ್ಲ. ಆ ಸಮಯ ನನ್ನ ತಂದೆಯ ಜೊತೆ 1ನೇ ಪ್ರತಿವಾದಿ ಇದ್ದರು ಎಂದರೆ ಸರಿ. ನಾವು ಮೂರು ಜನ ವಾದಿಯರು ಸುಮಾರು 15ವರ್ಷಗಳ ಹಿಂದೆ ದಾವಾ ಆಸ್ತಿಯನ್ನು ಬಿಟ್ಟಿರುತ್ತೇವೆ. ದಾವಾ ಸ್ವತ್ತು ನನ್ನ ತಂದೆಯ ಸ್ವಂತ ಸ್ವಯಾರ್ಜಿತ ಸ್ವತ್ತಾಗಿದೆ ದರ್ಕಾಸ್ ಮುಖಾಂತ ಬಂದಿರುತ್ತದೆ ಎಂದರೆ ಸರಿ. ನಾವು ವಾದಿಯರು ದಾವಾ ಸ್ವತ್ತು ಬಿಟ್ಟ ನಂತರ 1ನೇ ಪ್ರತಿವಾದಿ ಒಬ್ಬರೇ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1ನೇ ವಾದಿಗೆ ಸೇರಿದ ಗ್ಯಾರೇಜ್ ಆಕಾಶ್‌ಭವನದ ಬಳಿ ಇದೆ. 1ನೇ ಪ್ರತಿವಾದಿಯ ಸಂಸಾರ ಸಮೇತ ದಾವಾ ಸ್ವತ್ತಿನಲ್ಲಿ ಇದ್ದರು. ಮದುವೆ ಆಗುವಾಗ ಥವಾ ಅದಿಕ್ಕಿಂತ ಮೊದಲು 1 ಮತ್ತು 3ನೇ ವಾದಿಯರಿಗೆ ಪ್ರತ್ಯೇಕ ಆದಾಯ ಇತ್ತು, ಈ ಬಾಬ್ತು ದಾಖಲೆ ಇಲ್ಲ. ನನ್ನ ತಂದೆ ಟೈಲರ್ ಆಗಿ ಕೆಲಸ ಮಾಡುತ್ತಿದ್ದರು. 1ನೇ ಪ್ರತಿವಾದಿ ಮಂಗಳೂರಿನ ಕುದ್ರೋಳಿ ಯಲ್ಲಿ ಹೆಸರಾಂತ ಟೈಲರ್ ಆಗಿದ್ದಾರೆ ಎಂದರೆ ಸರಿ. ನನ್ನ ತಂದೆ ಯ ಜೀವಂತ ಕಾಲದಲ್ಲಿ 1ನೇ ಪ್ರತಿವಾದಿ ನನ್ನ ತಂದೆಯ ಜೊತೆ ಟೈಲರಿಂಗ್ ಕೆಲಸ ಮಾಡುತ್ತಿದ್ದರು

This is a True Copy of the Court Records Online. Authenticated @ districts.ecourtsindia.com/cnr/KADK020029832019/truecopy/order-5.pdf

www.ecourtsindia.com

ಎಂದರೆ ಸರಿ. 1ನೇ ಪ್ರತಿವಾದಿ ತಮ್ಮ ಟೈಲರಿಂಗ್ ವೃತ್ತಿಯಿಂದ ಮನೆಯನ್ನು ನೋಡಿಕೊಂಡು ನಮ್ಮನ್ನು ಸಹ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾವು ತಂದೆಯನ್ನು ದಾವಾ ಸ್ವತ್ತನ್ನು ಮತ್ತು ನಮ್ಮ ಮದುವೆಯ ಖರ್ಚನ್ನು ನಾನು ಮಾಡಿರುವ ಬಾಬ್ತು ದಾಖಲೆ ಇಲ್ಲ. ನನ್ನ ತಂದೆಗೆ 1ನೇ ಪ್ರತಿವಾದಿಯ ಮೇಲೆ ಹೆಚ್ಚಿನ ಪ್ರೀತಿ ಇತ್ತು ಎಂದರೆ ಸರಿಯಲ್ಲ. ನಾನು ನನ್ನ ತಂದೆಯನ್ನು ಅವರ ಜೀವಂತ ಕಾಲದಲ್ಲಿ ನೋಡಿಕೊಳ್ಳಲು ತೊಂದರೆ ಇರಲಿಲ್ಲ. ನನ್ನ ತಂದೆ ತೀರಿಕೊಳ್ಳುವಾಗ ಅವರ ದೈಹಿಕ ಮತ್ತು ಮಾನಸಿಕ ಸ್ಥಿತಿ ಚೆನ್ನಾಗಿರಲಿಲ್ಲ. ನನ್ನ ತಂದೆಯೇ ನನಗೆ, ಕೈ ಮತ್ತು ಕಾಲು ನೋವು ಎಂದು ಹೇಳುತ್ತಿದ್ದರು ಮತ್ತು 1ನೇ ಪ್ರತಿವಾದಿ ಚಿತ್ರ ಹಿಂಸೆ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದರು. ನಾವು ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ತಂದೆಗೆ 1ನೇ ಪ್ರತಿವಾದಿ ಚಿತ್ರ ಹಿಂಸೆ ಕೊಟ್ಟ ಬಗ್ಗೆ ಉಲ್ಲೇಖ ಇಲ್ಲ. ನಾನು 1ನೇ ಪ್ರತಿವಾದಿಯ ವಿರುದ್ಧ ನನ್ನ ತಂದೆಗೆ ಚಿತ್ರ ಹಿಂಸೆ ನೀಡಿದ ಬಗ್ಗೆ ಪೋಲಿಸ್ ಠಾಣೆಗೆ ದೂರು ನೀಡಿರುವುದಿಲ್ಲ. ನಾವು ನನ್ನ ತಂದೆಯನ್ನು ಯಾವಾಗಲು ನೋಡಿಕೊಂಡಿರುವುದಿಲ್ಲ, 1ನೇ ಪ್ರತಿವಾದಿಯೇ ನೋಡಿಕೊಂಡರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ತಂದೆಗೆ ಚಿತ್ರ ಹಿಂಸೆ ನೀಡುತಿತದ್ದರು ಎಂದುದಸುಳ್ಳು ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ನನಗೆ 1 ಮತ್ತು 3ನೇ ವಾದಿಯರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟಿ ಸವಾಲಿಗೆ ಮುಂದೂಡಲಾಯಿತು.**

ನ್ಯಾಯಾಲಯದ ಹೇಳಿಕೆಯ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇದೆ

2 ನೇ ಹೆ.ವ್ಯ.ನ್ಯಾ.ಮಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KADK020029832019/truecopy/order-5.pdf

www.ecourtsindia.com